ದುಂಡೇವ್ವ: ಏನ್ರೀ, ಇವತ್ತು ತವರು ಮನೀಗೆ ಹೊಂಟೀನಿ. ವರದಕ್ಷಿಣೆ ಪರದಕ್ಷಿಣೆ ತರಲೇನು?

ಕಾಡೇಶ: ಏನೂ ಬ್ಯಾಡ ಮಾರಾಯ್ತೀ ನೀ ಹೋದರೆ ಸಾಕು.

***

ಕಾಡೇಶ ಬೈಕಿನಲ್ಲಿ ಹುಡುಗಿಯೊಂದಿಗೆ ಸುತ್ತಾಡುವುದನ್ನು ದುಂಡೇಶ ನೋಡಿ ಮರುದಿನ ಕೇಳಿದ ಯಾರೋ ಅವಳು? ಬೈಕಲ್ಲಿ ನಿನ್ನ ಹಿಂದೆ ಕೂತು ನಗ್ತಿದ್ದಳಲ್ಲ?

ಓ ಅವಳಾ? 'ನನ್ನ ಸೊಸೆ ಮಾರಾಯಾ' ಅಂದ.

ಆದ್ರೆ, ನೀನು ಮಾತ್ರ ಹುಷಾರಾಗಿರು. ಹೋದ ವರ್ಷ ಅವಳು ನನ್ನ ಸೊಸೆ ಆಗಿದ್ಲು! ಎಂದು ದುಂಡೇಶ ಎಚ್ಚರಿಸಿದ.

***

ಕಾಡೇಶ: ನಮ್ಮೂರಲ್ಲಿ ಕೊರೊನ ಹಬ್ಬ ಆಚರಿಸ್ತಿದ್ದೀವಿ. ಬರ್ತೀಯಾ?

ದುಂಡೇಶ: ಅಂದ್ರೆ ಅಷ್ಟೊಂದು ಜನರಿಗೆ ಕೊರೊನ ಬಂದಿದೆಯಾ?

ಕಾಡೇಶ: ಇಲ್ಲ. ಇನ್ನೂ ಯಾರಿಗೂ ಬಂದಿಲ್ಲ. ಅದ್ಕೆ ಹಬ್ಬ!

***

ಡಾಕ್ಟರ್: ಏನ್ರೀ... ದುಂಡೇವ್ವ ಮುಂದಿನ ಹಲ್ಲುಗಳ್ಯಾಕೆ ಮುರಿದು ಹೋದ್ವು?

ದುಂಡೇವ್ವ: ನನ್ನ ಗಂಡ ಮುರಿದ ಸರ್.

ಡಾಕ್ಟರ್: ಯಾಕೆ?

ದುಂಡೇವ್ವ: ನೂರು ಜನ್ಮಕು, ನೂರಾರು ಜನ್ಮಕು... ಹಾಡಕ್ಕೆ ಶುರು ಮಾಡಿದ್ದೆ!

***

ಕಾಡೇಶ: ಕೊರೊನ ಬಂದ್ಮೇಲೆ ತುಂಬ ಬೇಜಾರಾಗಿದೆ ಮಾರಾಯಾ.

ದುಂಡೇಶ: ಯಾಕೋ?

ಕಾಡೇಶ: ಹುಡುಗಿಯರು ಮನೆಯಿಂದ ಹೊರಗೆ ಬರ್ತಾನೇ ಇಲ್ಲ, ಬಂದ್ರೂ ಮುಖ ಕಾಣದಂಗೆ ಮಾಸ್ಕ ಹಾಕಿರ್ತಾರೆ.

***

ದುಂಡೇಶ: ನನ್ನ ಲವರ್ರೇ ನನಗೆ ಮೊನ್ನೆ ಮೋಸ ಮಾಡಿದ್ಲು ಕಣೋ.

ಕಾಡೇಶ: ಅದ್ಹೆಂಗೆ?

ದುಂಡೇಶ: ನಾನು ಕೇಳ್ದೇ ಇದ್ರು ಮುತ್ತು ಕೊಟ್ಲು ಕಣೋ.

ಕಾಡೇಶ: ಅಯ್ಯೋ, ಖುಷಿ ಆಯ್ತು ತಾನೇ?

ದುಂಡೇಶ: ಖುಷಿ ಮನೆ ಹಾಳಾಗ, ಆಮೇಲೆ ಹೇಳಿದ್ಲು ಅವ್ಳಿಗೆ ಕೊರೊನ ಪೊಸಿಟಿವ್ ಅಂತ.

ಕಾಡೇಶ: ಹಾಗಾದ್ರೆ ನೀನು ಈಗ ಪಾಸಿಟಿವ್ವಾ?

***

ರಾಧಾ: ಯಾಕಲೇ, ಪೆನ್ನಿದ್ದೂ ರಿಫಿಲ್ ಹಿಡ್ದು ಬರೀತಿದ್ದೀಯಲ್ಲ ಯಾಕೆ?

ದುರ್ಗಿ: ನೋಡೇ, ಡಾಕ್ಟ್ರು ಭಾರವಾಗಿದ್ದನ್ನ ಎತ್ಬೇಡ ಅಂದಿದಾರೆ.

***

ರಾಧಿ: ರೀ, ನಾಳೆ ದಸರಾ ಹಬ್ಬಕ್ಕೆ ಮನೆಗೆ ನೆಂಟ್ರು ಬರ್ತಾರೆ. ಸಂಜೆ ಬರುವಾಗ ಈ ಚೀಟೀಲಿರೋ ದಿನಸಿ ತರ್ರೀ.



ಶಶಿಧರ್

## ತಪ್ಪಾಯ್ತು!

ಕಾಡೇಶ: ದೋಸ್ತಾ, ನಾನು ಡಾಕ್ಟರ್ ಹುಡುಗಿ ಲವ್ ಮಾಡಿದ್ದೇ ತಪ್ಪಾಯ್ತು.

ದುಂಡೇಶ: ಯಾಕ ಏನಾತಲೇ?

ಕಾಡೇಶ: ಅಯ್ಯೋ, ಆಕಿ ಬರದಿದ್ದ ಲವ್ ಲೆಟರ್ ಓದಾಕ ಆಗಲಿಲ್ಲ ಅದ್ಕ ಔಷಧ ಅಂಗ್ಡಿ ಗುಂಡ್ಯಾನ ಹತ್ರ ಓದಿಸ್ತಿದ್ದೆ. ಅದ ದೋಖಾ ಆತಲೆ.

ದುಂಡೇಶ: ಅದೇನಾತು ಬಿಡ್ಸಿ ಹೇಳಲೆ.

ಕಾಡೇಶ: ಆಗೋದೇನು ಗುಂಡ್ಯಾನ ಜೊತಿಗೆ ನನ್ನ ಲವರ್ ಓಡಿಹೋದ್ಲು.

ರಾಮು: ಆಗಲ್ಲ ಮಾರಾಯ್ತಿ. ತುಂಬ ಖರ್ಚಾಗ್ತದೆ.

ರಾಧಿ: ಹಾಗಾದ್ರೆ ನನ್ ತಂಗಿಯರಿಗೆ ಹಬ್ಬಕ್ಕೆ ಬರಬೇಡ್ರೀ ಅಂತ ಫೋನ್ ಮಾಡ್ತೀನಿ ಬಿಡ್ರಿ.

ರಾಮು: ಮೊದ್ಲೇ ಹೇಳೋದಲ್ವೇನೆ. ಚೀಟಿಯನ್ನು ಬೇಗ ತಾ.

***

ತಿಮ್ಮ: ಏನಲೇ ಈ ಉಪ್ಪಿಟ್ಟು ರುಚಿಯಾಗಿಲ್ಲ. ನಿನ್ನೆ ಮಾಡಿದ್ದು ಚೆನ್ನಾಗಿತ್ತಲ್ಲ.

ತಿಮ್ಮಿ: ರೀ, ನಾನೇನು ಬೇರೆ ಕೊಟ್ಟದೀನಾ? ಇದೂ ನಿನ್ನೆ ಮಾಡಿದ್ದೇ ಗೊತ್ತಾ?

***

ತಂಗಿ: ಅಣ್ಣ, ದೀಪಾವಳಿ ಹಬ್ಬಕ್ಕೆ ಬೆಂಗಳೂರಿಂದ ನನ್ನ ಫ್ರೆಂಡ್ಸ್ ಬರ್ತಾರೆ. ಅವ್ರಿಗೇನ್ ಗಿಫ್ಟ್ ಕೊಡ್ಲಿ?

ಅಣ್ಣ: ಚಿಂತೆ ಮಾಡ್ಬೇಡ ಎಲ್ರಿಗೂ ನನ್ ಫೋನ್ ನಂಬರ್ ಕೊಟ್ಟು ಕಳ್ಸು.

***

ಆತ: ಈ ಮಾಸ್ಕಗಳು ಎಂಥ ಅವಾಂತರ ಮಾಡ್ತಾವು ಮಾರಾಯಾ?

ಈತ: ಏನಾಯ್ತೀಗ?

ಆತ: ನನ್ನ ಲವರ್ ಅಂತ ತಿಳ್ಕೊಂಡು, ಪಕ್ಕದ ಮನೆ ಪಾರೀಗೆ ಮುತ್ಕೊಟ್ಟೆ. ಅವ್ರಪ್ಪ ಮನೆಗೆ ಬಂದು ಚೆನ್ನಾಗಿ ತದ್ಕೀದ.

***

ಅಪ್ಪ: ಏನಮ್ಮಾ, ಪರೀಕ್ಷೆಗೆ ಹೋಗಿ ಬಂದೆಯಾ?

ಮಗಳು: ಹೌದಪ್ಪ.

ಅಪ್ಪ: ಯಾವ ವಿಷಯ ಇತ್ತು? ಚೆನ್ನಾಗಿ ಉತ್ತರಿಸಿದೀಯಾ?

ಮಗಳು: ಇತಿಹಾಸ ಇತ್ತಪ್ಪ. ಎಲ್ಲ ನಾನು ಹುಟ್ಟೋದ್ಕಿಂತ ಮೊದ್ಲಿನ ಪ್ರಶ್ನೆ ಇದ್ವು. ನನಗೆ ಹೇಗೆ ಗೊತ್ತಾಗ್ಬೇಕು?

***

ಲಲಿತಾ: ಲೇ, ನಾವು ಕರ್ನಾಟಕದಲ್ಲಿ ಹುಟ್ಟಿದ್ದಕ್ಕೆ ಬಚಾವಾದ್ವಿ. ಇಂಗ್ಲೆಂಡಿನಲ್ಲಿ ಹುಟ್ಟಿದ್ರೆ, ನಮ್ಮನ್ನ ದೇವ್ರೇ ಕಾಪಾಡ್ಬೇಕಿತ್ತು.

ಗೌರಿ: ಯಾಕೆ, ಏನಾಗ್ತಿತ್ತು?

ಲಲಿತ: ಅಲ್ಲಿ ಹುಟ್ಟಿದ್ದರೆ ನಮ್ಗೆಲ್ಲಿ ಇಂಗ್ಲಿಷ್ ಬರ್ತಿತ್ತು?

***

ಜಗತ್ತಿನ ಅತೀ ಚಿಕ್ಕ ಪ್ರೇಮ ಕತೆ
ಅವಳು ನಕ್ಕಳು.
ಅವನ ಹೃದಯ ನಿಂತಿತು.

***

ಜಗತ್ತಿನ ಅತೀ ಚಿಕ್ಕ ರಜಾ ಚೀಟಿ
ಸಾರ್,
ಇವತ್ತು ನಾನು ವಠಾರ ಶಾಲೆಗೆ ಬರಲ್ಲ.
ಏನ್ ಮಾಡ್ಕೋತೀರೋ ಮಾಡ್ಕಳ್ಳಿ.

***

ತಂದೆಗೆ ವಿದೇಶದಲ್ಲಿದ್ದ ಮಗನ ಸಂದೇಶ:
ನನಗೆ ರಜೆ ಇಲ್ಲ.
ಅಮ್ಮನ ಅಂತ್ಯಕ್ರಿಯೆ ನೀವೇ ಮುಗಿಸಿ.

***

ಮೊಟ್ಟೆ ಇಡುವವರು...

ಶಿಕ್ಷಕರು: ಮೊಟ್ಟೆ ಇಡುವ 2 ಜೀವಿಗಳ ಹೆಸರು ಹೇಳಿ?

ಗುಂಡ: ವಿಜ್ಞಾನ ಶಿಕ್ಷಕರು, ಗಣಿತ ಶಿಕ್ಷಕರು ಸರ್.

***

ನಾಳೇನೂ ಹೋಗ್ಬೇಕಾ?

ತಾಯಿ: ವಠಾರ ಶಾಲೆಯ ಮೊದಲ ದಿನ ಹೇಗಿತ್ತು ಮಗಳೇ?

ಮಗಳು: ಅಂದ್ರೆ ನಾಳೇನೂ ನಾನು ವಠಾರ ಶಾಲೆಗೆ ಹೋಗ್ಬೇಕಾ?

***

ಕಾಲೇಜು ವಿದ್ಯಾರ್ಥಿಯೊಬ್ಬ ವಿರಾಮದಲ್ಲಿ ತಿಂಡಿ ಸೇವಿಸಲು ಜಾಗ ಇಲ್ಲದ್ದರಿಂದ ಉಪನ್ಯಾಸಕರ ಪಕ್ಕದಲ್ಲಿ ಕುಳಿತುಕೊಂಡ. ಉಪನ್ಯಾಸಕರಿಗೆ ಕೋಪ ಬಂದು ಕೆಕ್ಕರಿಸಿ ನೋಡಿ, 'ಹಂಸ ಪಕ್ಷಿಯೆಂದೂ ಹಂದಿಯೊಂದಿಗೆ ಸ್ನೇಹ ಮಾಡುವುದಿಲ್ಲ ಗೊತ್ತಾಯ್ತಾ?' ಎಂದರು.

'ಸರಿ ಸಾರ್, ಹಾಗಾದರೆ ನಾನು ಈಗಲೇ ಹಾರಿಹೋಗುತ್ತೇನೆ' ಅಂದ ವಿದ್ಯಾರ್ಥಿ ಜಾಗ ಖಾಲಿ ಮಾಡಿದ.

ಸಂಗ್ರಹ: ಪ್ರಕಾಶ.ಎಸ್.ಮನ್ನಂಗಿ,
ಮೋಟೆಬೆನ್ನೂರು